## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಶ್ರೀ ಜೆ.ಆರ್.ಶ್ರೀಧರ್ ಬಿನ್ ರಂಗಸ್ವಾಮಯ್ಯ, ಉಪಾಧ್ಯಕ್ಷರು, ಜಾಲಮಂಗಲ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಮನಗರ ಜಿಲ್ಲಾ ಪಂಚಾಯತಿ ಇವರ ಪತ್ರ ಸಂಖ್ಯೆ:ರಾಜಿಪಂ/ಸಿ6/ಸಿಆರ್-67/2017-18/1355-I, ದಿನಾಂಕ:22-06-2017.
2) ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್ ದಿನಾಂಕ:09-08-2017.
3) ಶ್ರೀ ಜೆ.ಆರ್.ಶ್ರೀಧರ್ ಬಿನ್ ರಂಗಸ್ವಾಮಯ್ಯ, ಉಪಾಧ್ಯಕ್ಷರು, ಜಾಲಮಂಗಲ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ಇವರ ಲಿಖಿತ ಹೇಳಿಕೆ ದಿನಾಂಕ: 17-10-2017 ಮತ್ತು 21-12-2017.
4) ಸರ್ಕಾರದ ಸಮಸಂಖ್ಯೆಯ ವಿಚಾರಣಾ ನೋಟೀಸ್, ದಿನಾಂಕ:06-12-2017.

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಮನಗರ ಜಿಲ್ಲಾ ಪಂಚಾಯತಿ ರವರು ಶ್ರೀ ಜೆ.ಆರ್.ಶ್ರೀಧರ್ ಬಿನ್ ರಂಗಸ್ವಾಮಯ್ಯ, ಉಪಾಧ್ಯಕ್ಷರು, ಜಾಲಮಂಗಲ ಗ್ರಾಮ ಪಂಚಾಯತಿಯ ಸಭೆಗಳಿಗೆ ಸತತವಾಗಿ ಗೈರುಹಾಜರಾಗುತ್ತಿದ್ದು, ಸದಸ್ಯರ ಮೇಲೆ ಕೊಲೆ ಆಪಾದನೆ ನಿಮಿತ್ತ ರಾಮನಗರ ಪೋಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ದಿನಾಂಕ:08-05-2016 ರಿಂದ ಈ ವರೆವಿಗೂ ಕಾರಾಗೃಹ ಬಂಧನದಲ್ಲಿರುತ್ತಾರೆ ಹಾಗೂ ಗ್ರಾಮ ಪಂಚಾಯತಿ ಸಾಮಾನ್ಯ ಸಭೆಗಳಿಗೆ ಹಾಜರಾಗುವಂತೆ ಸಭಾ ಸೂಚನಾ ಪತ್ರವನ್ನು ಕಳುಹಿಸಿದರೂ ಸ್ವೀಕೃತಿಯಾಗದೇ ವಾಪಸು ಬಂದಿರುತ್ತದೆ. ಆದ್ದರಿಂದ ಇವರ ಬಗ್ಗೆ ಕ್ರಮ ಕೈಗೊಳ್ಳಲು ಸೂಕ್ತ ನಿರ್ದೇಶನ ಕೋರಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ರಾಮನಗರ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆಂದು ತಿಳಿಸಿರುತ್ತಾರೆ.

ಶ್ರೀ ಜೆ.ಆರ್.ಶ್ರೀಧರ್ ಬಿನ್ ರಂಗಸ್ವಾಮಯ್ಯ ಇವರು ದಿನಾಂಕ:13-04-2016, 31-05-2016, 27-07-2016, 29-09-2016, 31-01-2017, 23-03-2017 ಹಾಗೂ 24-04-2017 ರಂದು ಜಾಲಮಂಗಲ ಗ್ರಾಮ ಪಂಚಾಯತಿಯಲ್ಲಿ ನಡೆದ 07 ಸಾಮಾನ್ಯ ಸಭೆಗಳಿಗೆ ಸತತವಾಗಿ ಗೈರು ಹಾಜರಾದ ಕಾರಣ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ನಿಯಮ 12 ಹಾಗೂ 13(ಸಿ)ರಂತೆ ಕ್ರಮ ಕೈಗೊಳ್ಳಲು ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ರಾಮನಗರ ರವರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (2) ರಲ್ಲಿ ಶ್ರೀ ಜೆ.ಆರ್.ಶ್ರೀಧರ್ ಬಿನ್ ರಂಗಸ್ವಾಮಯ್ಯ ರವರಿಗೆ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಕಲಂ 43(ಎ) ಮತ್ತು 48(4) ಅಡಿ ಕ್ರಮ ಜರುಗಿಸುವ ಸಲುವಾಗಿ ಸದರಿಯವರಿಗೆ ದಿನಾಂಕ:09-08-2017 ರಂದು ಕಾರಣ ಕೇಳಿ ನೋಟೀಸ್ ನೀಡಲಾಗಿದೆ.

ಅದರಂತೆ ಮೇಲೆ ಓದಲಾದ (3) ರಲ್ಲಿ ಶ್ರೀ ಜೆ.ಆರ್.ಶ್ರೀಧರ್ ಬಿನ್ ರಂಗಸ್ವಾಮಯ್ಯ, ಉಪಾಧ್ಯಕ್ಷರು, ಜಾಲಮಂಗಲ ಗ್ರಾಮ ಪಂಚಾಯತಿ ಇವರು ತಾನು 302 ಕೇಸ್ ನಲ್ಲಿ ಆರೋಪದಡಿಯಲ್ಲಿ ಕಾರಾಗೃಹ ಬಂಧಿಯಾಗಿರುವುದು ಸರಿಯಷ್ಟೆ. ಆದರೆ ಈ ಆರೋಪವು ಬರೀ ಆರೋಪವಾಗಿದೆಯೇ ಹೊರತು ನಾನು ಆರೋಪಿಯೆಂದು ತೀರ್ಮಾನವಾಗಿರುವುದಿಲ್ಲ. ನ್ಯಾಯಾಂಗ ವಿಚಾರಣೆ ಬಾಕಿ ಇರುತ್ತದೆ. ನಾನು ಕಾರಾಗೃಹ ಬಂಧಿಯಾಗಿರುವುದರಿಂದ ಮಾತ್ರವೇ ಗ್ರಾಮ ಪಂಚಾಯತಿ ಸಾಮಾನ್ಯ ಸಭೆಗಳಿಗೆ ಹಾಜರಾಗಿರುವುದಿಲ್ಲ ಹೊರತು ಉದ್ದೇಶಪೂರ್ವಕವಾಗಿ ಆಗಿರುವುದಿಲ್ಲ. ಆರೋಪದ ವಿಚಾರಣೆ ಖೈದಿಯಾಗಿರುವುದರಿಂದ ಜಾಲಮಂಗಲ ಗ್ರಾಮ ಪಂಚಾಯತಿ ಸಾಮಾನ್ಯ ಸಭೆಗೆ ಭಾಗವಹಿಸಲು ಆಗಿರುವುದಿಲ್ಲ. ಅಲ್ಲದೇ ಈ ಸಂದರ್ಭದಲ್ಲಿ ನನಗೆ

ಮೇಲಾಧಿಕಾರಿಗಳಿಗೆ ತಿಳಿಸಲು ಸಹ ಆಗಿರುವುದಿಲ್ಲ. ಇದರ ಹಿಂದಿನ ಎಲ್ಲಾ ಸಾಮಾನ್ಯ ಸಭೆಗಳಿಗೆ ನಾನು ಹಾಜರಾಗಿರುತ್ತೇನೆ. ಉತ್ತಮವಾಗಿ ಗ್ರಾಮ ಪಂಚಾಯತಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ ಮತ್ತು ನನ್ನ ಸದಸ್ಯತ್ವಕ್ಕೆ ಕಪ್ಪು ಚುಕ್ಕೆಬಾರದಂತೆ ಆಡಳಿತವನ್ನು ನಡೆಸಿರುತ್ತೇನೆ. ದಯಮಾಡಿ ಗ್ರಾಮ ಪಂಚಯತಿ ಸಾಮಾನ್ಯ ಸಭೆಗೆ ಕಾರಾಗೃಹದ ಬಿಡುಗಡೆಯ ಬಳಿಕ ಹಾಜರಾಗಲು ಅನುಮತಿ ನೀಡುವಂತೆ ಹಾಗೂ ನನ್ನ ಸದಸ್ಯ ಮತ್ತು ಉಪಾಧ್ಯಕ್ಷ ಸ್ಥಾನದಲ್ಲಿ ಮುಂದುವರೆಯಲು ಅವಕಾಶ ನೀಡಬೇಕಾಗಿ ಕೇಳಿಕೊಂಡಿರುತ್ತಾರೆ.

ಮೇಲೆ ಓದಲಾದ (4) ರನ್ವಯ ಶ್ರೀ ಜೆ ಆರ್ ಶ್ರೀಧರ್ ಬಿನ್ ರಂಗಸ್ವಾಮಯ್ಯ, ಉಪಾಧ್ಯಕ್ಷರು, ಜಾಲಮಂಗಲ ಗ್ರಾಮ ಪಂಚಾಯತಿ ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ದಿನಾಂಕ: 21-12-2017 ರಂದು ಜರುಗಿದ ವಿಚಾರಣೆಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜಾಲಮಂಗಲ ಗ್ರಾಮ ಪಂಚಾಯತಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ರಾಮನಗರ ಹಾಗೂ ಆಪಾದಿತ ಉಪಾಧ್ಯಕ್ಷರು ಹಾಜರಿರುತ್ತಾರೆ. ವಿಚಾರಣೆಯಲ್ಲಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜಾಲಮಂಗಲ ಗ್ರಾಮ ಪಂಚಾಯತಿ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ರಾಮನಗರ ರವರು ಸದರಿ ಆರೋಪಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿದ್ದು, ಆರೋಪವು ಧೃಡಪಟ್ಟಿರುತ್ತದೆ.

ಸರ್ಕಾರವು ಲಭ್ಯವಿರುವ ಎಲ್ಲಾ ದಾಖಲಾತಿಗಳನ್ನು ಹಾಗೂ ಆಪಾದಿತ ಉಪಾಧ್ಯಕ್ಷರ ಹೇಳಿಕೆಯನ್ನು ಪರಿಶೀಲಿಸಲಾಗಿದ್ದು, ಸದರಿಯವರು ಅನುಮತಿ ಇಲ್ಲದೇ ಸತತ 4 ಕ್ಕಿಂತ ಹೆಚ್ಚು ಗ್ರಾಮ ಪಂಚಾಯತಿ ಸಭೆಗಳಿಗೆ ಹಾಜರಾಗಿಲ್ಲದಿರುವ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ಪ್ರಕರಣ 43(ಎ) ಮತ್ತು 48(4) ರನ್ವಯ ಅವರ ಸದಸ್ಯತ್ವವನ್ನು ರದ್ದುಪಡಿಸಲು ಸರ್ಕಾರವು ನಿರ್ಣಯಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 910 ಗ್ರಾಪಂಅ 2017 ಬೆಂಗಳೂರು, ದಿನಾಂಕ: 19-04-2018.**

ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಜೆ.ಆರ್.ಶ್ರೀಧರ್ ಬಿನ್ ರಂಗಸ್ವಾಮಯ್ಯ, ಉಪಾಧ್ಯಕ್ಷರು, ಜಾಲಮಂಗಲ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ ರವರು ಅನುಮತಿ ಇಲ್ಲದೇ ಸತತ 4 ಕ್ಕಿಂತ ಹೆಚ್ಚು ಗ್ರಾಮ ಪಂಚಾಯತಿ ಸಭೆಗಳಿಗೆ ಹಾಜರಾಗಿಲ್ಲದಿರುವ ಹಿನ್ನೆಲೆಯಲ್ಲಿ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 43(ಎ) ಮತ್ತು 48(4) ರನ್ವಯ ಕ್ರಮ ಜರುಗಿಸಿ ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕು, ಜಾಲಮಂಗಲ ಗ್ರಾಮ ಪಂಚಾಯತಿಯ ಉಪಾಧ್ಯಕ್ಷ ಸ್ಥಾನದಿಂದ ವಜಾಗೊಳಿಸಿ, ಸದರಿಯವರ ಸದಸ್ಯತ್ವವನ್ನು ತಕ್ಷಣದಿಂದ ಜಾರಿಗೆ ಬರುವಂತೆ ರದ್ದುಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿ:

1) ಜಿಲ್ಲಾಧಿಕಾರಿಗಳು, ರಾಮನಗರ ಜಿಲ್ಲೆ.
2) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ರಾಮನಗರ ಜಿಲ್ಲಾ ಪಂಚಾಯತಿ, ರಾಮನಗರ ಜಿಲ್ಲೆ.
3) ಕಾರ್ಯನಿರ್ವಾಹಕ ಅಧಿಕಾರಿ, ರಾಮನಗರ ತಾಲ್ಲೂಕು ಪಂಚಾಯತಿ, ರಾಮನಗರ ಜಿಲ್ಲೆ.

4) ಶ್ರೀ ಜೆ.ಆರ್.ಶ್ರೀಧರ್ ಬಿನ್ ರಂಗಸ್ವಾಮಯ್ಯ, ಉಪಾಧ್ಯಕ್ಷರು, ಜಾಲಮಂಗಲ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ.
5) ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಜಾಲಮಂಗಲ ಗ್ರಾಮ ಪಂಚಾಯತಿ, ರಾಮನಗರ ತಾಲ್ಲೂಕು, ರಾಮನಗರ ಜಿಲ್ಲೆ.
6) ಕಛೇರಿ ಪ್ರತಿ / ಹೆಚ್ಚುವರಿ ಪ್ರತಿ.
7) ಗಣಕ ಕೋಶ.

ಪ್ರತಿಯನ್ನು ಮಾಹಿತಿಗಾಗಿ:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.